## ಮುನ್ನುಡಿ

# ನಿಜವಾದ ಯೇಸು ಯಾರು?

1960 ಮತ್ತು 70ರಲ್ಲಿ ಅಮೇರಿಕೆಯ ದೂರದರ್ಶನದಲ್ಲಿ "ಟು ಟೆಲ್ ದ ಟ್ರೂಥ್" (ಸತ್ಯವನ್ನು ಹೇಳಲು) ಎಂಬ ಪ್ರಖ್ಯಾತ ಕಾರ್ಯಕ್ರಮವನ್ನು ಪ್ರಸಾರಮಾಡಿದ್ದರು. ಆ ಕಾರ್ಯಕ್ರಮದಲ್ಲಿ ಅಸಾಧಾರಣ ಕಾರ್ಯವನ್ನು ಮಾಡಿದ್ದ ಒಬ್ಬನೇ ವ್ಯಕ್ತಿಯ ಹೆಸರಿನಲ್ಲಿ, ಮೂರು ಜನರು ಕಾಣಿಸಿಕೊಂಡಿದ್ದರು. ಅವರಿಗೆ ಪ್ರಶ್ನೆಗಳನ್ನು ಕೇಳಿದ ನಂತರ, ಆ ಕಾರ್ಯಕ್ರಮದ ನಿರೂಪಕನು ಸತ್ಯವನ್ನು ಹೇಳುತ್ತಿದ್ದಾನೆ ಎಂದು ನಂಬಿ ವ್ಯಕ್ತಿಗೆ ಅಧಿಕ ಅಂಕಗಳನ್ನು ನೀಡಬೇಕಿತ್ತು. ಅಂತಿಮವಾಗಿ ನಿರೂಪಕನಾದ ಗ್ಯಾರಿ ಮೂರ್ ಎಂಬಾತನು "ಸತ್ಯವನ್ನೇ ಹೇಳುತ್ತಿರುವ ವ್ಯಕ್ತಿಯು - ನಿಂತುಕೊಳ್ಳಬಹುದೇ?" ಎಂದು ಹೇಳುವಾಗ, ಸತ್ಯವನ್ನೇ ಹೇಳಿದವನನ್ನು ಪ್ರಕಟಿಸಲಾಗುತ್ತಿತ್ತು. ಸುಳ್ಳುಗಾರರು ಯಾರು ಎಂಬ ಸತ್ಯಾಂಶವು ಹೊರಬೀಳುವದಿತ್ತು.

ಯೇಸುವಿನ ಕುರಿತಾಗಿ ನಿಜವಾದ ಯೇಸು ಯಾರು ಎಂಬ ಪ್ರಶ್ನೆಗೆ, ನಿಜವಾದ ಯೇಸು ಎದ್ದು ನಿಲ್ಲಬಹುದೇ? ಎಂಬ ಪ್ರಶ್ನೆಯನ್ನು ನೀವುಗಳು ಕೇಳಬಹುದು. ಯೇಸು ಚರಿತ್ರೆಯ ವಿವಾದವಿಲ್ಲದ ವ್ಯಕ್ತಿಯಾಗಿದ್ದಾನೆ. ಆತನು ಪಂಡಿತರುಗಳನ್ನು ಧಾರ್ಮಿಕ ಭಕ್ತರನ್ನು ಹಾಗೂ ಮನರಂಜನಾ ವ್ಯಕ್ತಿಗಳನ್ನು ಆಕರ್ಷಿಸಿದ್ದರೂ, ಆತನನ್ನು ಅರಿಯುವದಕ್ಕೆ ಈ ಸಂಗತಿಗಳು ಸಹಾಯಿಸುವದಿಲ್ಲ.

ಒಂದು ಗುಂಪಿನ ಜನರು ("ಜೀಸಸ್ ಸೆಮಿನಾರ್": ಎಂಬ ಗುಂಪಿನ ಪಂಡಿತರು) ಆತನನ್ನು ಯೆಹೂದ್ಯರ ಕಥೆಯನ್ನು ಹೇಳುವ ಅಲೆಮಾರಿ ಎಂದು ಕರೆದಿರುವರು, ಆತನು ಯಾರಿಗೂ ನಿಂದನೆಯನ್ನು ಮಾಡಿರುವದಿಲ್ಲ ಅಂದರು.[1] ಇನ್ನೂ ಕೆಲವರು ಆತನನ್ನು ಗುಣಪಡಿಸುವ ತೀವ್ರವಾದಿ, ಮಾಂತ್ರಿಕ, ಸಾಮಾಜಿಕ ಕ್ರಾಂತಿಕಾರಿ, ಅಥವಾ ರಾಜಕೀಯ ಕ್ರಾಂತಿಕಾರಿ ಎಂದು ವರ್ಣಿಸಿರುವರು. ಮೆಲ್‌ಗಿಬ್‌ಸನ್ ತಮ್ಮ 2004ರ *"ದಿ ಪ್ಯಾಷನ್ ಆಫ್ ಕ್ರೈಸ್ಟ್"* ಎಂಬ ಚಲನ ಚಿತ್ರದಲ್ಲಿ ಆತನನ್ನು ಬಾಧೆಪಡುವ ವ್ಯಕ್ತಿಯನ್ನಾಗಿ ಪ್ರತಿಬಿಂಬಿಸಿದ್ದರೂ, ಆತನು ಯಾರು ಎಂಬ ಸ್ಪಷ್ಟನೆಯನ್ನು ನೀಡಿರುವದಿಲ್ಲ. ಇತ್ತೀಚಿನ ದಿನಗಳಲ್ಲಿನ ಪೇಪರ್ಸ್‌ನಲ್ಲಿ ಹೊಸ ಒಡಂಬಡಿಕೆಯ ಕ್ರೈಸ್ತರು ವಿವರಿಸುವ ಯೇಸು ನಿಜವಾಗಿ ಆ ರೀತಿಯಾಗಿ ಇರುವದಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಈತನು ಅಧ್ಯಾತ್ಮಿಕ ವ್ಯಕ್ತಿಯಾಗಿರಲಿಲ್ಲ ಎಂದು ತಿಳಿಸಿ ಆತನ ನಿಜಾಂಶವನ್ನು ಅಡಗಿಸಿಡುವ ಕಾರ್ಯ ತಂತ್ರವನ್ನು ರೂಪಿಸಿದ್ದಾರೆ.

ಯೇಸು ಯಾರು ಎಂಬ ಸತ್ಯವನ್ನು ತಿಳಿಸಲು ಬಯಸದ ಜನರು, ಸಹ ಆತನ ಸತ್ಯಾಂಶದ ಕುರಿತು ಗೊಂದಲವನ್ನು ಸೃಷ್ಟಿಸಿದ್ದಾರೆ. ಕೆಲವು ಧಾರ್ಮಿಕ ವ್ಯಕ್ತಿಗಳು ಆತನನ್ನು ತಮ್ಮ ಉದ್ವೇಗದಿಂದ ವಿವರಿಸಿ: ಯೇಸು ನನ್ನ ಹೃದಯವನ್ನು ಮುಟ್ಟುತ್ತಾನೆ, "ಯೇಸು ಸಮಾಧಾನದ ಮೂಲ" ಎಂದಿರುವರು. ಆದರೆ ಆತನನ್ನು ನಿಜವಾದ ವ್ಯಕ್ತಿಯೆಂದು ಗಮನ ಹರಿಸಿರುವದಿಲ್ಲ, ಆತನ ಹೆಸರು ನಮ್ಮ ಉದ್ವೇಗದ ಹೊಂದಿಕೊಳ್ಳುವ ನಾನು ಹೊರತಾಗಿ, ಆತನು ಚರಿತ್ರೆಯ ವ್ಯಕ್ತಿಯೆಂದು ಪ್ರಕಟಿಸಿರುವದಿಲ್ಲ. ಯೇಸುವಿನ ಕುರಿತಾಗಿ ಅನೇಕ ಸತ್ಯಾಂಶಗಳನ್ನು ಅರಿಯಬಹುದು ಎಂಬ ತತ್ವವನ್ನು ಅವರುಗಳು ಅರಿಯುವಾಗ ಆಶ್ಚರ್ಯಪಡುತ್ತಾರೆ.

ಇಂತಹ ಗೊಂದಲಗಳು ಹೊಸ ವಿಚಾರಗಳಲ್ಲ. ದೈವ ಶಾಸ್ತ್ರ ಪಂಡಿತನಾದ ಹೆಲ್‌ಮುಟ್ ತ್ರೈಲಿಕ್ಸೆಯವರು, "ಪ್ರತಿಯೊಂದು ಯುಗದವರು ಯೇಸುವಿನ ಚಿತ್ರಣವನ್ನು ತಿರುಚಿದ್ದಾರೆ" ಎಂದು ಬರೆದಿರುವರು.[2] ಯಾಲೆ ಚರಿತ್ರಕಾರರಾದ ಜೆರಸ್ಲೋವ್ ಪೆಲಿಕಾನ್‌ವರು ಒಂದು

ಯುಗದಲ್ಲಿ ವರ್ಣಿಸಲ್ಪಟ್ಟ ಯೇಸುವಿನ ಕುರಿತಾದ, ವಿಚಾರವು ಆ ನಿರ್ದಿಷ್ಟವಾದ ಯುಗಕ್ಕೆ ಪ್ರಮುಖ ತತ್ವವಾಗಿರುತ್ತದೆ ಎಂದು ಬರೆದಿರುವರು.[3] ಯೇಸುವಿನ ಕುರಿತಾದ ಯೋಜನೆಗಳು, ಯೇಸು ಯಾರು ಎಂಬುದಾಗಿ ತಿಳಿಸದೆ, ಆತನನ್ನು ಯೋಚಿಸಿದವರ್‍ಯಾರು ಎಂಬ ಅಂಶವನ್ನು ಎತ್ತಿ ತೋರಿಸುತ್ತದೆ. ನಮಗೆ ಇಷ್ಟ ಬಂದಂತ ರೀತಿಯಲ್ಲಿ ಯೇಸುವನ್ನು ನಾವುಗಳು ನೋಡುವವರಾಗಿದ್ದೇವೆ, ವಿನಃ ಆತನ ಕುರಿತಾದ ನಿಜಾಂಶಗಳನ್ನು ಗಮನಿಸುವದಿಲ್ಲ, ಇದರ ಪರಿಣಾಮವಾಗಿ, ಯೇಸುವಿನ ಕುರಿತು ಮತನಾಡುವವರು, ಯೇಸುವಿನ ನಾಮದ ಮಹತ್ವದ ವ್ಯತ್ಯಾಸಗಳನ್ನೇ ತಿಳಿಸುವವರಾಗಿದ್ದಾರೆ.

ಯೇಸುವಿನ ಬಗ್ಗೆ ನಾವುಗಳು ಏನನ್ನು ಅರಿಯಬಹುದು ಎಂದೇ ನಮಗೆ ಪ್ರಮುಖ ಅಂಶ ವಾಗಿರುತ್ತದೆ. ಯೇಸು ನಮ್ಮ ಮಾನಸಿಕ ಉದ್ವೇಗಕ್ಕೆ ಸ್ಪಂದಿಸುವವನು ಎಂದು ಅರಿಯದೆ, ಯೇಸು ನಿಜವಾಗಿ ಜೀವಿಸಿದ್ದನು, ರೋಮಾ ಚಕ್ರವರ್ತಿಯ ಸಾಮ್ರಾಜ್ಯದಲ್ಲಿ ಮರಣವನ್ನು ಅನುಭವಿಸಿದನು ಎಂದು ಅರಿಯಬೇಕು.

---

ಟಿಪ್ಪಣಿಗಳು

[1]ಯೇಸುವಿನ ಹೇಳಿಕೆಯಲ್ಲಿ ಶೇಕಡ 18ರಷ್ಟು ಮಾತ್ರ ಹೊಸ ಒಡಂಬಡಿಕೆಯಲ್ಲಿ ದಾಖಲಾಗಿದೆ. ಇದನ್ನು ಸರ್ವಾನುಮತದಿಂದ ಅವರುಗಳು ಒಪ್ಪಿರುವದಿಲ್ಲ. [2]Helmut Thielicke, *How Modern Should Theology Be?* trans. H. George Anderson (Philadelphia: Fortress Press 1969), 18. [3]Jaroslav Pelikan, *Jesus Through the Centuries: His Place in the History of Culture* (New Haven, Conn: Yale University Press 1985), 3.